ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಚೇರಿ

ನಂ.86, ಶುಭೋದಯ ಕಾಂಪ್ಲೆಕ್ಸ್
ರೈಲ್ವೆ ಸಮನಾಂತರ ರಸ್ತೆ,
ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು – 560 020

ಸಂಖ್ಯೆ: ಕೈಜಇ/ಜವಳಿ/ಜಪ್ರಅ/ನಿಧಿ/2019-20 ದಿನಾಂಕ: 21.06.2019

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ,
................. ವಿಭಾಗ / ವಲಯ.

ಉಪ / ಸಹಾಯಕ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ,
ಜಿಲ್ಲಾ ಪಂಚಾಯತ್,
..................................ಜಿಲ್ಲೆ

ಮಾನ್ಯರೆ,

ವಿಷಯ: ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರಿಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ಯೋಜನೆಯ ಮಾರ್ಗಸೂಚಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ವಾಕೈ/04/JAKY/2019 ದಿನಾಂಕ: 12.06.2019

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರಿಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ಯೋಜನೆಯ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ ಅರ್ಹ ಹಾಗೂ ಸೂಕ್ತ ಪ್ರಸ್ತಾವನೆಗಳನ್ನು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಸಹಾಯಧನ ಬಿಡುಗಡೆಗೆ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ.

24 JUN 2019
ರವಾನಿಸಿದೆ
34

ಸರ್ಕಾರಿ ಆದೇಶ ಸಂಖ್ಯೆ: ವಾಕೈ 04 JAKY 2019, ದಿನಾಂಕ: 12.06.2019ಕ್ಕೆ ಸಂಬಂಧಿಸಿದ ಅನುಬಂಧ

ವಿಷಯ: ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರಿಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ಯೋಜನೆಯ ಮಾರ್ಗಸೂಚಿ ಹೊರಡಿಸುವ ಕುರಿತು.

ಉಲ್ಲೇಖ 2019-20ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ - 287

******

ರಾಜ್ಯದಲ್ಲಿ ಜವಳಿ ನೀತಿಯಡಿ ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳೆಯರು ರಾಜ್ಯದ ವಿವಿಧ ಸಿದ್ಧ ಉಡುಪು ಘಟಕಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಬಹುತೇಕ ಮಹಿಳೆಯರಿಗೆ ತಮ್ಮ ಸ್ವಗ್ರಾಮ ಅಥವಾ ವಾಸಿಸುವ ಊರುಗಳಲ್ಲಿ ಇರುವ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡಲಾಗದ ಗ್ರಾಮೀಣ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಅವಶ್ಯಕತೆ ಇರುತ್ತದೆ. ಆದುದರಿಂದ ಅಂತಹ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ಒಂದು ಇಂಡಸ್ಟ್ರಿಯಲ್ ಹೊಲಿಗೆ ಯಂತ್ರ ಖರೀದಿಸಲು ಸಹಾಯಧನ ನೀಡಿ ಸ್ವಯಂ ಉದ್ಯೋಗ ಮಾಡಲು ಅನುಕೂಲ ಮಾಡಲು ಉದ್ದೇಶಿಸಲಾಗಿದೆ.

2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ **"ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರಿಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಈ ಉದ್ದೇಶಕ್ಕಾಗಿ 2019-20ನೇ ಸಾಲಿನಲ್ಲಿ ರೂ.2.00 ಕೋಟಿಗಳನ್ನು ಒದಗಿಸಿದೆ"** ಎಂದು ಘೋಷಿಸಲಾಗಿರುತ್ತದೆ

ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡಲಾಗದ ಗ್ರಾಮೀಣ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ರೂ.30,000/- ಗಳ ಘಟಕ ವೆಚ್ಚದಲ್ಲಿ ಒಂದು ಇಂಡಸ್ಟ್ರಿಯಲ್ ಹೊಲಿಗೆ ಯಂತ್ರ ಖರೀದಿಸಲು ಶೇ.50 ರಷ್ಟು ಸಹಾಯಧನ ಒದಗಿಸಲಾಗುವುದು. ಇದರಿಂದ ಮಹಿಳೆಯರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಅನುಕೂಲವಾಗುವುದು.

1. ಫಲಾನುಭವಿಗಳ ಅರ್ಹತೆ:-
   - ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
   - ಫಲಾನುಭವಿಯು ಸ್ವಂತ / ಲೀಸ್ / ಬಾಡಿಗೆ ಮನೆ ಹೊಂದಿರಬೇಕು.
   - ಜವಳಿ ನೀತಿಯಡಿ ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳೆಯಾಗಿರಬೇಕು.
   - ಇಂಡಸ್ಟ್ರಿಯಲ್ ಹೊಲಿಗೆ ಯಂತ್ರ ಅಳವಡಿಸಲು ಅವಶ್ಯವಿರುವ ವಿದ್ಯುತ್ ಸಂಪರ್ಕ ಹೊಂದಿರಬೇಕು.

2. ಹಣಕಾಸಿನ ನೆರವು
   - ಘಟಕ ವೆಚ್ಚ - ಪ್ರತಿ ಇಂಡಸ್ಟ್ರಿಯಲ್ ಹೊಲಿಗೆ ಯಂತ್ರಕ್ಕೆ ರೂ.30,000/-ಗಳು.
   ಇಂಡಸ್ಟ್ರಿಯಲ್ ಹೊಲಿಗೆ ಯಂತ್ರವನ್ನು ಅಳವಡಿಸಲು ಅವಶ್ಯವಿರುವ ಮೊತ್ತವನ್ನು ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ಅಥವಾ ಸ್ವಂತ ಬಂಡವಾಳದೊಂದಿಗೆ ಅನುಷ್ಠಾನಗೊಳಿಸುವುದು.
   - ಘಟಕ ಸ್ಥಾಪಿಸಿದ ನಂತರ ಸರ್ಕಾರದ ಸಹಾಯಧನಕ್ಕೆ ಪ್ರಸ್ತಾವನೆ ಸಲ್ಲಿಸುವುದು.
   - ಸರ್ಕಾರದ ಸಹಾಯಧನ ಘಟಕ ವೆಚ್ಚದ ಶೇ.50 ರಂತೆ ಸಾಮಾನ್ಯ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಗರಿಷ್ಟ ರೂ.15,000/- ಗಳನ್ನು ನೀಡಲಾಗುವುದು (Backend Subsidy).

133 / 13/6

DPO 2/5/6/19 JD

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರ ಆಪ್ತ ಶಾಖೆ

ಸಂಖ್ಯೆ 113

- ನಿಗದಿಯಾದ ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಅವಶ್ಯವಿರುವ ಮೊತ್ತವನ್ನು ಫಲಾನುಭವಿಯು ಸಾಲದ ರೂಪದಲ್ಲಿ ಪಡೆದು / ಸ್ವಂತ ಬಂಡವಾಳದೊಂದಿಗೆ ಅನುಷ್ಠಾನಗೊಳಸತಕ್ಕದ್ದು.

| ವಿವರ | ಘಟಕ ವೆಚ್ಚ (01 ಹೊಲಿಗೆ ಯಂತ್ರಕ್ಕೆ) | ಸರ್ಕಾರದ ಸಹಾಯಧನ ಶೇ. ಶೇ.50 ರಷ್ಟು | ಫಲಾನುಭವಿ ವಂತಿಕೆ |
|---|---|---|---|
| | | ಸಾಮಾನ್ಯ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ | |
| ಇಂಡಸ್ಟ್ರಿಯಲ್ ಹೊಲಿಗೆ ಯಂತ್ರ | ರೂ.30,000/- | ರೂ.15,000/- | ರೂ.15,000/- |

3. ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಇತ್ತೀಚಿನ ಭಾವಚಿತ್ರ.
- ಆಧಾರ್ ಕಾರ್ಡ್ ಪ್ರತಿ.
- ಬಿ.ಪಿ.ಎಲ್. ಕಾರ್ಡ್ / ಪಡಿತರ ಚೀಟಿ ಪ್ರತಿ.
- ಫಲಾನುಭವಿಯ ಜಾತಿ ದೃಢೀಕರಣ ಪ್ರತಿ.
- ಜವಳ ನೀತಿಯಡಿ ಸೀವಿಂಗ್ ಮೆಷಿನ್ ಅಪರೇಟರ್ ತರಬೇತಿ ಪಡೆದ ಪ್ರಮಾಣ ಪತ್ರ.
- ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ ಬಿಡುಗಡೆ ಪತ್ರ ಅಥವಾ ಸ್ವಂತ ಬಂಡವಾಳ ಹೂಡಿಕೆ ಬಗ್ಗೆ ಖಾತರಿ ದೃಢೀಕರಣ ಪತ್ರ.
- ಫಲಾನುಭವಿ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯ ಪಾಸ್ ಬುಕ್ ಪ್ರತಿ.

4. ಅನುಷ್ಠಾನ

- ಈ ಯೋಜನೆಯನ್ನು 2019-20ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಅನುಷ್ಠಾನಗೊಳಸುವುದು.
- ಕೈಮಗ್ಗ ಮತ್ತು ಜವಳ ಇಲಾಖೆಯ ಜಿಲ್ಲಾ ಮಟ್ಟದ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಅಸಂಘಟಿತ ವಲಯದ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡುವುದು. ಫಲಾನುಭವಿಗಳು ಘಟಕ ಸ್ಥಾಪಿಸುವ ಅವಶ್ಯಕತೆಗೆ ತಕ್ಕಂತೆ ಬ್ಯಾಂಕಿನಿಂದ ಸಾಲ ಪಡೆದು / ಸ್ವಂತ ಬಂಡವಾಳ ಹೂಡಿಕೆಯೊಂದಿಗೆ ಅನುಷ್ಠಾನಗೊಳಸಿ, ಸರ್ಕಾರದ ಸಹಾಯಧನಕ್ಕಾಗಿ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸುವುದು.
- ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ, ಅರ್ಹ ಪ್ರಸ್ತಾವನೆಯನ್ನು ತಮ್ಮ ಶಿಫಾರಸ್ಸಿನೊಂದಿಗೆ ವಿಭಾಗ/ವಲಯ ಮಟ್ಟದ ಜಂಟಿ ನಿರ್ದೇಶಕರುಗಳ ಮೂಲಕ ಸರ್ಕಾರದ ಸಹಾಯಧನ ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

B. Venkatesh 12/6/19.

(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ (ಜವಳ) (ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.